**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 2072/2025**

**ಫಿರ್ಯಾದುದಾರರು** ವ್ಯವಸಾಯ ಸೇವಾ ಸಹಕಾರಿ ಸಂಘ ನಿಯಮಿತ, ಭಟ್ಕಳ
ಪ್ರತಿನಿಧಿಸುವವರು, ಇದರ ವಸೂಲಾತಿ ಅಧಿಕಾರಿಯಾದ ,
ಶ್ರೀ ಗಜಾನನ ತಂದೆಃ ಕೃಷ್ಣ ನಾಯ್ಕ,

**– ವಿರುದ್ಧ –**

**ಆರೋಪಿತರು** ಜಗದೀಶ ತಂದೆಃ ಶನಿಯಾರ ನಾಯ್ಕ,
ವಯಸ್ಸುಃ 32 ವರ್ಷ
ಸಾಃ ಕೆಳಗಿನಮನೆ, ಹೊಸ್ಮನೆ, ಮುಂಡಳ್ಳಿ,
ಭಟ್ಕಳ ತಾಲೂಕು, ಉತ್ತರಕನ್ನಡ ಜಿಲ್ಲೆ.

**ಆಪಾದನೆ**

ಶ್ರೀಮತಿ ಭಾಗ್ಯಶ್ರೀ ಕೋಂ ದೇವೆಂದ್ರ ನಾಯ್ಕ ಇವರು ದಿನಾಂಕಃ 07-09-2023 ರಂದು ಪಿರ್ಯಾದಿ ಸಂಸ್ಥೆಯಿಂದ ವೈಯಕ್ತಿಕ ಸಾಲವಾಗಿ ರೂ.2,00,000/- (ರೂಪಾಯಿ ಎರಡು ಲಕ್ಷ ಮಾತ್ರ) ಹಣವನ್ನು ಶೇಕಡಾ 15% ಬಡ್ಡಿ ಮತ್ತು 2% ಶೇಕಡಾ ದಂಡದ ಬಡ್ಡಿ ದರದಲ್ಲಿ ಸಾಲದ ಖಾತೆ ಸಂಖ್ಯೆ PL-2978 ರಲ್ಲಿ ಪಡೆದುಕೊಂಡಿದ್ದು ಇರುತ್ತದೆ. ಆರೋಪಿಯಾದ ನೀವು ಸದ್ರಿ ಸಾಲಕ್ಕೆ ಜಾಮೀನುದಾರರಾಗಿರುತ್ತೀರಿ. ಸದ್ರಿ ಸಾಲವನ್ನು ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡು ಸಾಲದ ಕರಾರು, ಡಿ.ಪಿ ನೋಟ್ ಮತ್ತು ಇತರೇ ಕಾಗದ ಪತ್ರಗಳನ್ನು ಬರೆದುಕೊಟ್ಟಿದ್ದು ಇರುತ್ತದೆ. ಆದರೆ ನೀವು ಒಪ್ಪಿಕೊಂಡಂತೆ ಸಾಲವನ್ನು ಅವಧಿಯೊಳಗೆ ಮರುಪಾವತಿ ಮಾಡಿದ್ದು ಇರುವುದಿಲ್ಲ. ದಿನಾಂಕಃ 23-06-2025 ರ ತನಕ ಅಸಲು ಹಾಗೂ ಬಡ್ಡಿ ಸೇರಿ ರೂ. 2,24,166/- (ರೂಪಾಯಿ ಎರಡು ಲಕ್ಷದ ಇಪ್ಪತ್ತಾಲ್ಕು ಸಾವಿರದ ಒಂದು ನೂರ ಅರವತ್ತಾರು ಮಾತ್ರ) ಬಾಕಿ ಇರುತ್ತದೆ. ನಂತರ ಪಿರ್ಯಾದಿಯವರು ಸದ್ರಿ ಸಾಲದ ಹಣವನ್ನು ಮರುಪಾವತಿ ಮಾಡುವಂತೆ ನಿಮ್ಮನ್ನು ಕೇಳಿಕೊಂಡಾಗ, ಸದ್ರಿ ಸಾಲದ ಹಣವನ್ನು ಮರು ಪಾವತಿಸುವ ಸಲುವಾಗಿ ನೀವು ಕೆನರಾ ಬ್ಯಾಂಕ್, ಭಟ್ಕಳ ಶಾಖೆಯ ಚೆಕ್ ನಂಬರ್ 687607 ನ್ನು ರೂ. 2,24,166/- (ರೂಪಾಯಿ ಎರಡು ಲಕ್ಷದ ಇಪ್ಪತ್ತಾಲ್ಕು ಸಾವಿರದ ಒಂದು ನೂರ ಅರವತ್ತಾರು ಮಾತ್ರ) ಕ್ಕೆ ದಿನಾಂಕಃ 23-06-2025 ಎಂದು ನಮೂದಿಸಿ ಫಿರ್ಯಾದಿದಾರರಿಗೆ ನೀಡಿರುತ್ತೀರಿ. ಸದ್ರಿ ಚೆಕ್ಕನ್ನು ಫಿರ್ಯಾದಿ ಸಂಸ್ಥೆಯವರು ನಿಮ್ಮ ವ್ಯವಹಾರದ ಕೆನರಾ ಬ್ಯಾಂಕ್

ಭಟ್ಕಳ ಶಾಖೆ ಮುಖಾಂತರ  ಭಟ್ಕಳ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಭಟ್ಕಳ ಮುಖ್ಯ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ, "Funds Insufficient" ಎಂಬ ಹಿಂಬರಹದೊಂದಿಗೆ ದಿನಾಂಕಃ 25-06-2025 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 27-06-2025 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ನೋಂದಾಯಿತ ಅಂಚೆ ದ್ವಾರದ ಮುಖಾಂತರ ನಿಮಗೆ ಕಳುಹಿಸಿದ್ದು, ಸದ್ರಿ ನೋಟಿಸು ಮುಟ್ಟಿದ 15 ದಿವಸದೊಳಗಡೆ ಚೆಕ್ಕನಲ್ಲಿ ನಮೂದಿಸಿದ ಹಣವನ್ನು ನೀಡುವಂತೆ ಸೂಚಿಸಿದ್ದು ಇರುತ್ತದೆ, ಸದ್ರಿ ನೋಟಿಸ್ಸನ್ನು ನೀವು ದಿನಾಂಕಃ 02-07-2025 ರಂದು ಸ್ವೀಕರಿಸಿದ್ದರೂ ಸಹ ನೀವು  ಇಂದಿನವರೆಗೂ ಸಹ  ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ಸಹಿ ಇದೆ/-

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 26-11-2025.

ನ್ಯಾಯಿಕ ದಂಡಾಧಿಕಾರಿ, ಭಟ್ಕಳ.